# ಯಕ್ಷಗಾನ: ಕುಮಟಾ ಗೋವಿಂದ ನಾಯ್ಕರ 'ಹನುಮಂತನ' ಪಾತ್ರದ ಸಾಂಸ್ಕೃತಿಕ ಮಹತ್ವ

**ಸತೀಶ ಜಿ. ನಾಯ್ಕ**

ಉಪನ್ಯಾಸಕ, ಜಿ.ಐ. ಬಾಗೇವಾಡಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ನಿಪ್ಪಾಣಿ.

**DOI: https://doi.org/10.5281/zenodo.17254942**

## ABSTRACT:

ಯಕ್ಷಗಾನದಲ್ಲಿ ಕುಮಟಾ ಗೋವಿಂದ ನಾಯ್ಕರ ಸಾಧನೆ ಬಹಳ ದೊಡ್ಡದು. ರಾಮಾಯಣ, ಮಹಾಭಾರತ ಪ್ರಸಂಗಗಳ ಹನುಮಂತನ ಪಾತ್ರಗಳ ನಿರ್ವಹಣೆಯ ಮೂಲಕ ಗೋವಿಂದ ನಾಯ್ಕರನ್ನು "ಅಭಿನವ ಹನುಮಂತ", "ಕಲಿಯುಗದ ಹನುಮಂತ" ಎಂದೆಲ್ಲ ಕರೆಯುವಂತೆ ಮಾಡಿತು. ಯಕ್ಷಗಾನ ರಾಮಾಯಣ ಮತ್ತು ಭಾರತ ಪ್ರಸಂಗಗಳಾದ ಮಾರುತಿ ಪ್ರತಾಪ, ವೀರಮಣಿ ಕಾಳಗ, ರಾಮಾಂಜನೇಯ ಕಾಳಗ, ಲಂಕಾದಹನ, ಶರಸೇತುಬಂಧ, ಚೂಡಾಮಣಿ, ಅಂಗದ ಸಂಧಾನ, ಇಂದ್ರಜಿತ್ ಕಾಳಗ, ಹನುಮದ್ವಿಲಾಸ, ವಾಲಿವಧೆ, ಉಂಗುರ ಸಂಧಿ, ಜಾಂಬವತಿ ಕಲ್ಯಾಣ, ಅತಿಕಾಯ ಕಾಳಗ, ಸೀತಾಪಹರಣ, ಸೇತುಬಂಧ, ಲವಕುಶ ಕಾಳಗ, ರಾವಣವಧೆ, ಸೌಗಂಧಿಕಾ ಪುಷ್ಪಹರಣ ಮುಂತಾದ ಎಷ್ಟೋ ಕಥಾಭಾಗದಲ್ಲಿ ಬರುವ ಹನುಮಂತನ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಎಲ್ಲಾ ಪ್ರಕಾರದ ಹನುಮಂತನ ಪಾತ್ರಗಳಿಗೂ ಹೆಸರುವಾಸಿ. ಗೋವಿಂದ ನಾಯ್ಕರ ಹನುಮಂತ ಧೀರ, ಗಂಭೀರ, ಅಷ್ಟೇ ಶಾಂತ, ಶೃಂಗಾರ. ಭಾವನಾತ್ಮಕವಾದ ತವನಿಧಿ. ಭಕ್ತಿರಸದ ಮಹೋನ್ನತ ಪ್ರತೀಕ. ಮುಗ್ಧತೆಯ ಉತ್ತುಂಗ. ಮಾತಿನ ಮಲ್ಲನಲ್ಲ. ವೈಚಾರಿಕ ವಿವೇಚನಾ ಮೂರ್ತಿ. ಇನ್ನು ಬಹಳ ಮುಖ್ಯವಾಗಿ ಅವರ ಪ್ರವೇಶಕ್ರಮದ ಶೈಲಿ ಅತ್ಯಾಕರ್ಷಕವಾದದ್ದು. 'ಹನುಮಂತ'ನಾಗಿ ರಂಗವೇರಿದರೆ ಸಾಕ್ಷಾತ್ ರಾಮಾಯಣದ ಹನುಮಂತನ ಆವಾಹನೆ ಆದ ಹಾಗೆ. 'ರಘೋತ್ತಮ ರಾಮ ರಮಾಕಾಂತ ರಾಮ' ಎನ್ನುವ ಅಷ್ಟತಾಳದ ಮುಕ್ತಾಯಕ್ಕೆ ಪದ್ಮಾಸನದಲ್ಲೇ ಪೀಠ ಏರುವ ಅವರ ಶೈಲಿ ನೋಡುಗರಿಗೆ ರೋಮಾಂಚನ. ಗೋವಿಂದ ನಾಯ್ಕರ ಹನುಮಂತನ ಪಾತ್ರವೆಂದರೆ ಪರಂಪರೆಯ ಅನುಷ್ಠಾನದೊಂದಿಗಿನ ನಾವೀನ್ಯತೆಯ ಪ್ರತೀಕ. ಶಿಷ್ಟ, ವಿಶಿಷ್ಟ, ಬದ್ಧ, ಪ್ರಬುದ್ಧ. ಪ್ರತಿಯೊಂದು ಪ್ರಸಂಗದ ವಿವಿಧ ಸನ್ನಿವೇಶಗಳಲ್ಲೂ ಭಿನ್ನವಾಗಿಯೇ ಕಾಣಿಸಿಕೊಳ್ಳುತ್ತಾ ವೈವಿಧ್ಯತೆಗೆ ಹೆಸರಾದರು. ಇಲ್ಲಿ ಗೋವಿಂದ ನಾಯ್ಕರ ಹನುಮಂತನ ಪಾತ್ರದ ಕುರಿತು ಇರುವ ವಿಶೇಷತೆಯನ್ನು ತಿಳಿಸುತ್ತಾ ಅದರ ಸಾಂಸ್ಕೃತಿಕ ಮಹತ್ವವನ್ನು ಹೇಳಲಾಗುವುದು.

## KEYWORDS:

ಮಹಾಮೂರ್ತಿ, ಕಲಾಕೃತಿ, ಅಭಿನಯ, ಮಹಾಪಥ, ಪರಂಪರೆ, ಮಹೋನ್ನತ, ಭಾಗವತ, ಜೀವನಕಾಂಕ್ಷೆ, ಲೋಕಜನ್ಯ.

**ಪ್ರಸ್ತಾವನೆ:**

ಯಕ್ಷಗಾನ ಕಲೆಯಲ್ಲಿ ಸುಪ್ರಸಿದ್ಧ ಕಲಾವಿದನೊಬ್ಬನಿಂದ ಸೃಷ್ಟಿಯಾದ ಪಾತ್ರಗಳು ನೂರಾರು ವರ್ಷಗಳ ಕಾಲ ಜನಮನದಲ್ಲಿ ನೆಲೆಸಿ ಹಚ್ಚಹಸುರಾಗಿರುವ, ಅವರ ನಡೆನುಡಿಗಳನ್ನು ಅನುಭವ ಆಲೋಚನೆಗಳನ್ನು ದೃಷ್ಟಿ ಧ್ಯೇಯಗಳನ್ನು ಕ್ರಿಯೆ ಪ್ರತಿಕ್ರಿಯೆಗಳನ್ನು ಸಂತತವಾಗಿ ರೂಪಿಸುತ್ತಿರುವ, ಪ್ರಭಾವಿಸುತ್ತಿರುವ ಉತ್ಕೃಷ್ಟ ಪಾತ್ರ, ಪಾತ್ರಕೃತಿಗಳನ್ನು ಮತ್ತೊಬ್ಬ ಕಲಾವಿದ ಮುಟ್ಟುವುದಕ್ಕೆ ಎಂಟೆದೆ ಬೇಕು. ಸಾಗರ ಸದೃಶವಾಗಿ ಬೆಳೆದು ಧೀರಗಂಭೀರವಾಗಿ ವಿಜೃಂಭಿಸುವ ಆ ಕಥಾಆಕೃತಿಯನ್ನು ಕಟ್ಟಿಕೊಡುವುದಕ್ಕೆ, ಜನಮನಕ್ಕೆ ಮುಟ್ಟುವಂತೆ ದರ್ಶನಗೈಯುವುದಕ್ಕೆ ಜೀವನದಲ್ಲಿ ಅಪಾರವಾದ ಸಾಹಸ, ಕಲಾ ಸಾಧನೆ ಬೇಕು. ಪೂರ್ವ ಕಲಾವಿದರೇರಿದ ಎತ್ತರಗಳನ್ನು, ಇಳಿದ ಅನುಭವದಾಳಗಳನ್ನು, ಕಂಡ ಜೀವನಕಾಣ್ಕೆಗಳನ್ನು, ಕಂಡರಿಸಿದ ವಿನೂತನತೆಯನ್ನು ಅರಿತು ತನ್ನದಾಗಿಸಿಕೊಳ್ಳಬೇಕಾದರೆ ಜೀವಮಾನದ ನಿರಂತರ ಪ್ರಯತ್ನಬೇಕು. ಹೀಗಿರುವಾಗ ಪೌರಾಣಿಕ ಕಥೆಯ ಪಾತ್ರಗಳನ್ನು ಒಬ್ಬನಲ್ಲ ಹತ್ತಾರು ಮಹಾಕಲಾವಿದರ ಪ್ರತಿಭಾಲೋಕವನ್ನು ಹೊಕ್ಕು ಬಂದಿರುವಾಗ ಪೂರ್ವ ಕಲಾಪರಂಪರೆಯ ಮತ್ತು ಜ್ಯೇಷ್ಠ ಕಲಾವಿದರ ದೈತ್ಯಪ್ರತಿಭೆಯೇ ಮೆಚ್ಚುವಂತೆ ತುಂಬಿ ನವನವೋನ್ಮೇಷದ ಕಾಂತಿಯಿಂದ ಕಂಗೊಳಿಸುವಂತೆ ಪುನರ್ ಸೃಷ್ಟಿಸಿರುವಾಗ, ಅದೇ ಕಥೆಯ ಪಾತ್ರಗಳನ್ನು ಇಂದಿಗೂ ಒಬ್ಬ ನೂತನ ಕಲಾವಿದ ತನ್ನ ಕಲಾವಂತಿಕೆಯ ಮೂಲ ಭಿತ್ತಿಯನ್ನಾಗಿ ಆಯ್ದುಕೊಳ್ಳುವುದು ಕಷ್ಟಕರವಾದರೂ ಅದು ಕಲಾವಿದರ ಸೃಜನಶೀಲತೆಯ ಮಹೋನ್ನತಿಯಿಂದ ರೂಪುಗೊಳ್ಳುತ್ತಲೇ ಇರುತ್ತದೆ. ಇದನ್ನು ತನ್ನದಾದ ವಿಶಿಷ್ಟ ನೆಲೆಗಟ್ಟಿನ ಮೇಲೆ, ನಂಬಿಕೆಯ ಆಧಾರದಿಂದ, ಒಂದು ಸಮಗ್ರವಾದ ಬೃಹತ್ ಪ್ರತಿಮೆಯಾಗಿರುವ ಮಹಾಕಥೆಯನ್ನು ಹೊಸತನದಿಂದ ಸೃಷ್ಟಿಸುವಾಗ ಆತುರ ಆಕಾಂಕ್ಷೆಗಳಿಂದ ಮನಸ್ಸಿಗೆ ಬಂದಂತೆ ಬದಲಾಯಿಸುವ ಹಕ್ಕು ಕಲಾವಿದನಿಗಿಲ್ಲ. ಹಾಗೆ ಮಾಡಿದರೆ ಅದು ವಿಕೃತಸೃಷ್ಟಿಯಾಗುತ್ತದೆ; ಕಲಾ ಪರಂಪರೆಯನ್ನು ಛಿದ್ರಗೊಳಿಸಿದಂತಾಗುತ್ತದೆ. ಇದರಿಂದ ಜನಮನದಲ್ಲಿ ಸ್ಥಾನಪಡೆಯುವುದು, ಗೌರವಕ್ಕೆ ಭಾಜನರಾಗುವುದೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಹತ್ತಾರು ಪೂರ್ವಕಲಾವಿದರಿಂದ ರಚಿತವಾದ ನೂರಾರು ಪಾತ್ರಕೃತಿಗಳು ಪರಂಪರಾಪುಷ್ಟವಾದ ಜನತೆಯ ಕ್ರೂರ ಅವಜ್ಞೆಗೆ ಪಾತ್ರವಾಗಿ ಕಾಲಪ್ರವಾಹದಲ್ಲಿ ಹೇಳಹೆಸರಿಲ್ಲದಂತೆ ಕೊಚ್ಚಿ ಹೋಗಿವೆ; ಕೆಲವೊಂದು ಮಾತ್ರ ತಮ್ಮ ವಿಶಿಷ್ಟತೆಗಳಿಂದಾಗಿ ಸಹೃದಯರ ದೃಷ್ಟಿಪಥದಲ್ಲಿ ಕಾಣಿಸಿಕೊಳ್ಳುತ್ತವೆ. ಹಳೆಯ ಪುರಾಣ ಕಥಾವಸ್ತುವನ್ನೊಳಗೊಂಡ ಪಾತ್ರಗಳು ಮತ್ತು ಹೊಸ ಸಮಕಾಲೀನವಾದ ಕಾಲ್ಪನಿಕ ವಸ್ತುವನ್ನಾಧರಿಸಿದ ಪಾತ್ರಕೃತಿಗಳೆಂದು ಜನ ಕೆಲ ಸಂದರ್ಭಗಳಲ್ಲಿ ಶ್ರೇಷ್ಠ, ಕನಿಷ್ಠ ಸಾಧನೆಗಳೆಂದು ಭ್ರಮಿಸುವವರಿದ್ದಾರೆ. ಆದರಿದು ಬರೀ ಜನತೆಯಲ್ಲಿನ ಭ್ರಮೆಯಷ್ಟೇ. ಪಾತ್ರಗಳಲ್ಲಿರಬೇಕಾದದ್ದು, ಪಾತ್ರಗಳ ಕಥೆ, ಅಭಿನಯ, ಮಾತು, ಕುಣಿತ, ನಾಟ್ಯ,

ಜನನೀಯವಾದ ಅನುಭವ, ಅಭ್ಯಾಸದ ಸಾಧನೆಯೇ ಶ್ರೇಷ್ಠವೆಂದು ಅರಿಯಬೇಕು.

ರಸಪೂರ್ಣವಾದ ಅಭಿನಯವನ್ನೊಳಗೊಂಡ ಮಹಾಪಾತ್ರಗಳನ್ನು ಕಡಿದು ಭೀಮಬಂಧುರವಾದ ಗಂಭೀರ ಸುಂದರವಾದ ಮಹಾಮೂರ್ತಿಯನ್ನು ನಿರ್ಮಾಣಮಾಡುವ ಭವ್ಯಕೌಶಲ ಆ ಮಹಾ ಕಲಾವಿದನಿಗೆ ಇರಬೇಕಾಗುತ್ತದೆ. ತನ್ನ ಮನಸ್ಸಿಗೆ ಬಂದಂತೆ ಅದನ್ನು ಸೃಜಿಸುವ; ಅಭಿವ್ಯಕ್ತಿಸುವ ಸ್ವಾತಂತ್ರ್ಯ ಕಲಾವಿದನಿಗಿಲ್ಲ. ಆತ ಪರಂಪರೆಯ ಚೌಕಟ್ಟಿನೊಳಗೆ ತನ್ನ ಮಹತಿಯನ್ನು ಮೆರೆದು ಲೋಕದ ಕಣ್ಸೆಳೆಯಬೇಕಾಗುತ್ತದೆ. ಕಲಾವಿದನಾದವನು ಪ್ರಾಚೀನಕ್ಕೂ ವರ್ತಮಾನಕ್ಕೂ ಸಮರ್ಥವಾದ ಪ್ರಜ್ಞಾವಂತಿಕೆಯ ಏಣಿಯನ್ನೊಡ್ಡಿ ಸಂಧಿಸುವ ಪ್ರಣಾಳಿಕೆಯಾಗಿರಬೇಕು. ಯಾವುದು ಮೂಲ ಕಲೆಯ ಜೀವ, ಅದರ ಕೇಂದ್ರಬಿಂದುವನ್ನು ಅರಿತುಕೊಳ್ಳಬೇಕು. ಆ ಮೂಲತತ್ವವನ್ನು ಅರಿತುಕೊಳ್ಳುವುದೇ ಕಲಾವಿದನ ಮೊದಲ ಮಹಾಸಾಧನೆಯಾಗುತ್ತದೆ. ತನ್ನಲ್ಲಡಗಿರುವ ಅರಿವಿನ ಮೂಲಕ ಅವನು ತನ್ನ ಕಾಲ, ದೇಶಸ್ಥಿತಿಯಲ್ಲಿ ಹೇಗೆ ಮರುಹುಟ್ಟಬೇಕು ಎಂಬುದಕ್ಕೆ ಅವನು ಸಾರ್ಥಕವಾದ ಉತ್ತರ ಒದಗಿಸುವುದೇ ಎರಡನೇಯ ಮಹಾಸಾಧನೆಯಾಗುತ್ತದೆ. ತನ್ನ ಕಾಲ ದೇಶವನ್ನು ಅದರಲ್ಲಿ ಕಾಣುವ, ಕಾಣಿಸುವ; ಈ ಕಾರ್ಯಕ್ಕೆ ಒದಗಬಹುದಾದ ಎಲ್ಲ ಅಡೆತಡೆಗಳನ್ನೂ ಅದು ತನ್ನ ವ್ಯಕ್ತಿಮಿತಿಯಾಗಿರಲಿ ಆವರಣ ಮಿತಿಯಾಗಿರಲಿ ನಿವಾರಿಸಿ ಗೆಲ್ಲುವ ಶಕ್ತಿಯೇ ಮೂರನೇಯ ಮಹತ್ತರ ಸಾಧನೆಯಾಗುತ್ತದೆ. ಈ ಮೂರೂ ದೃಷ್ಟಿಗಳಿಂದ ಒಬ್ಬ ಕಲಾವಿದ ತನ್ನ ಪಾತ್ರಕೃತಿಗಳ ಮೂಲಕ ಯಶಸ್ವಿಯಾಗಿರುವುದನ್ನು ಕಾಣಬಹುದಾದರೆ ಅದು ಗೋವಿಂದ ನಾಯ್ಕರಲ್ಲಿ ಎಂಬುದು ವಿಶೇಷ. ಈ ಲೇಖನದಲ್ಲಿ ಕುಮಟಾ ಗೋವಿಂದ ನಾಯ್ಕರ ಹನುಮಂತನ ಪಾತ್ರದ ಸಾಂಸ್ಕೃತಿಕ ಮಹತ್ವವನ್ನು ಮಾತ್ರ ಗಮನಿಸಲಾಗಿದೆ. ಹನುಮಂತನ ಪಾತ್ರದ ವೈವಿಧ್ಯತೆಗಳೇನು? ಅದು ಸಾಂಸ್ಕೃತಿಕವಾಗಿ ಯಾಕೆ ಮಹತ್ವವನ್ನು ಪಡೆದಿದೆ ಎಂಬಿತ್ಯಾದಿ ವಿಚಾರಗಳನ್ನು ಇಲ್ಲಿ ಪ್ರಚುರಪಡಿಸುತ್ತೇನೆ.

ಭಾರತೀಯ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಹಾಗೂ ಜನಪದರಲ್ಲಿ ವಿಶಿಷ್ಟವೂ ಮಹತ್ವಪೂರ್ಣವೂ ಆದ ಸ್ಥಾನಮಾನ, ಗೌರವಗಳನ್ನು ಪಡೆದಿರುವ ಮಹಾಚೇತನ ಹನುಮಂತನದು. ಜನಪದ ಕಾವ್ಯಗಳಲ್ಲಂತೂ ಈತನಿಗೆ ಗಣಪತಿಯಷ್ಟೇ, ಕೆಲವೇಳೆ ಅದಕ್ಕಿಂತ ಹೆಚ್ಚು ಅಗ್ರಸ್ಥಾನವಿದೆ. ಈತನ ಗುಡಿಗಳಿಲ್ಲದ ಹಳ್ಳಿಗಳು, ಈತನ ಪೂಜೆ ಮಾಡದ ಹಳ್ಳಿಗರು ಅಪರೂಪ. ಎಲ್ಲ ಕೃತಿಗಳಲ್ಲೂ, ಎಲ್ಲರ ಕಲ್ಪನೆಯಲ್ಲೂ ಈತ ಆಜನ್ಮ ಬ್ರಹ್ಮಚಾರಿಯೆಂದು, ಮಹಾ ರಾಮಭಕ್ತನೆಂದೂ, ಅಸಮಾನ ಸಾಹಸಿಯೆಂದೂ, ಅಸೀಮ ಮೇಧಾವಿಯೆಂದೂ, ಸುಸಂಸ್ಕೃತಿಯ ಶಿಖರವೆಂದೂ, ಅತೀಂದ್ರಿಯ ಶಕ್ತಿಯುಳ್ಳ ಮಹಾಮಹಿಮನೆಂದೂ ಪ್ರಕೀರ್ತಿತನಾಗಿದ್ದಾನೆ. ಬಹಳ ಮಹತ್ವದೇನೆಂದರೆ

ಹನುಮಂತ ವಾಲ್ಮೀಕಿ ರಾಮಾಯಣದಲ್ಲಿಯೇ ಅತ್ಯಂತ ಸತ್ವಶಾಲಿಯಾಗಿ, ವಾಕ್ಪಟುವಾಗಿ, ಸೂಕ್ಷ್ಮಮತಿಯಾಗಿ, ಭಕ್ತಶಿರೋಮಣಿಯಾಗಿ ಚಿತ್ರಿತನಾಗಿದ್ದಾನೆ. ಯಕ್ಷಗಾನದ ಪ್ರಸಂಗಕೃತಿಗಳಲ್ಲಿ ಹನುಮಂತನ ಪಾತ್ರವು ಇನ್ನಷ್ಟು ಪ್ರಚುರಶಕ್ತಿಯ ಕೇಂದ್ರಬಿಂದುವೆಂಬಂತೆ ಮತ್ತೂ ಮೇಲೇರಿಸಿ ಚಿತ್ರಿಸಿದ್ದಾರೆ. ಆತನ ಅಂತರಂಗದ ಸಾಧನೆಯನ್ನು, ಯೋಗಶಕ್ತಿಯನ್ನು, ಅಸಾಧಾರಣ ಸಮಯಪ್ರಜ್ಞೆಯನ್ನು, ದೈವಶಕ್ತಿಯನ್ನು, ಹಿತಮಿತ ಆದರ್ಶ ನಡವಳಿಕೆಯನ್ನು, ವಿನಯಶೀಲತೆಯನ್ನು, ಶ್ರೀಮದ್ ಗಾಂಭೀರ್ಯವನ್ನು ಅನಾದೃಶ್ಯವಾಗಿ ಬಣ್ಣಿಸಿದೆ. ಶ್ರೀರಾಮಾಂಜನೇಯರ ಆತ್ಮಸಂಬಂಧ ಅವರ ಬಾಹ್ಯಪರಿಚಯ ಸಂದರ್ಭಕ್ಕಿಂತ ಪ್ರಾಚೀನವೂ ನಿಗೂಢವೂ ದೈವಪ್ರೇರಿತವೂ ಆದುದೆಂಬುದನ್ನು ವಿಶಿಷ್ಟವಾಗಿ ಸಮರ್ಥವಾಗಿ ಚಿತ್ರಿಸುವ ಮೂಲಕ ಈ ಪಾತ್ರಕ್ಕೆ ಒಂದು ಹೊಸ ಆಯಾಮಗಳನ್ನು ಒದಗಿಸಿದೆ.

ಯಕ್ಷಗಾನದಲ್ಲಿ ಹನುಮಂತನ ಪಾತ್ರಕೃತಿಗೆ ವಿಭಿನ್ನವಾದ ಹಿನ್ನೆಲೆಗಳಿವೆ. ಅದು ಅತ್ಯಂತ ವಿಶಿಷ್ಟ. ಪೂರ್ವದ ಕಲಾವಿದರ ಹನುಮಂತನ ಪಾತ್ರಗಳು ಈಗಿನಂತಿರಲಿಲ್ಲ. ಹನುಮಂತ ವೀರತ್ವದ ಪ್ರತಿನಿಧಿ. ಮುಖವರ್ಣಿಕೆ ಕಪಿಯದ್ದಾಗಿದ್ದು, ಕಪಿಯ ತುಂಟತನವೇ ಕಾಣಿಸುತ್ತಿತ್ತು. ಸಾಂಪ್ರದಾಯಿಕ ಉಡುಪು ರಾಜವೇಷದ್ದೇ ಆಗಿತ್ತು. ಬಿಳಿಬಾಲ್ಮುಂಡು, ಬಿಳಿ ದಗಲೆ, ಬಿಳಿ ಸೊಗಲಿ ಹೀಗೆ ಉಪಯೋಗಿಸುತ್ತಿದ್ದುದ್ದೆಲ್ಲ ಬಿಳಿಯ ಉಡುಪುಗಳನ್ನೇ. ಆಭರಣಗಳಾದರೂ ಕಟ್ಟು ವೇಷದ್ದೇ ಆಗಿತ್ತು. ಬಿಳಿ ಗಡ್ಡವನ್ನು ಕಟ್ಟಲಾಗುತ್ತಿತ್ತು. ಗಡ್ಡ ಕಟ್ಟಿದ ಬಳಿಕ ಗೆಜ್ಜೆಡ್ಡಿಗೆ ಕಟ್ಟಿ ಕರ್ಣಪತ್ರ, ಕೆನ್ನೆಪ್ಪು, ಚೆನ್ನಪ್ಪುಗಳನ್ನಿಡುತ್ತಿದ್ದರು. ಬಳಿಕ ಹನುಮಂತನಿಗೆ ಮೀಸಲಾದ ಕಿರೀಟವನ್ನು ಕಟ್ಟಿ, ಹಿಂಭಾಗದಲ್ಲಿ ಬಿಳಿಯ ಕೇಸರಿಯನ್ನಿಳಿಬಿಡುತ್ತಿದ್ದರು. ಮುಖಾಲಂಕಾರದಲ್ಲಿ ವಿವಿಧ ರೀತಿಯ ಸುಳಿಗಳನ್ನು ಬರೆದು ಚಿತ್ರಿಸಲಾಗುತ್ತಿತ್ತು. ಹನುಮಂತನಿಗೆ ಸುಳಿಬರೆಯುವುದೇ ವಿಶಿಷ್ಟವಾದದ್ದು. ಕಣ್ಣಿನ ಸುತ್ತಲೂ ಮೂರು ಸುಳಿಗಳನ್ನು (ಒಂದರಿಂದ ಆರು ಸುಳಿಗಳನ್ನು ಬರೆಯುವ ಪದ್ಧತಿ ಇದೆ) ಬರೆಯಲಾಗುತ್ತದೆ. ಬಾಯಿಯ ಸುತ್ತಲೂ ವರ್ತುಲ ರಚಿಸಲಾಗುತ್ತದೆ. ಇಲ್ಲಿ ಕಪಿ ಕೇವಲ ಸಾಂಕೇತಿಕ. ಬಾಲವನ್ನು ಧರಿಸುವ ಪದ್ಧತಿ ಹಿಂದೆ ಇರಲಿಲ್ಲ. ''ಹಿಂದೆ ಹನುಮಂತನಿಗೆ ಮೀಸಲಾಗಿದ್ದ ಕಿರೀಟವೊಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ದೊರಕಿದೆ. ಈ ಕಿರೀಟ ಕೂಗಲ ಬಳ್ಳಿಯದು. ಗಾತ್ರದಲ್ಲಿ ಕಿರೀಟ ಚಿಕ್ಕದು. ಆದರೆ ಹನುಮಂತನ ಮುಖಕ್ಕೆ ಹೊಂದಿಕೊಳ್ಳುವಂತಹದ್ದು.'' ಬಡಗುತಿಟ್ಟಿನಲ್ಲಿ ಭಿನ್ನ ಶೈಲಿಯ ಆಭರಣಗಳೊಂದಿಗೆ, ಅರೆ ಮೈ ವೇಷಭೂಷಣಗಳೊಂದಿಗೆ, ತನ್ನದೇ ಆದ ಕಲಾತ್ಮಕವಾದ ಹಿನ್ನೆಲೆಯಲ್ಲಿಯೇ 'ಹನುಮಂತನ' ಪಾತ್ರಚಿತ್ರಣದ ಸ್ವರೂಪವನ್ನು ರೂಪಿಸಿಕೊಟ್ಟಿದ್ದಾರೆ. ನಾಟಕೀಯ ಶೈಲಿಯ ಕಿರೀಟವನ್ನು, ಕೆಲವರು ಮುಂಡು ಕಿರೀಟವನ್ನು ಬಳಸುತ್ತಾರೆ. ಇದು ಯಕ್ಷಗಾನದ ಬಡಗುತಿಟ್ಟಿನ ಸಂಪ್ರದಾಯದಲ್ಲಿ ಅಂಗೀಕಾರಗೊಂಡಿದೆ.

“ಯಕ್ಷಗಾನದಲ್ಲಿ ವೇಷಗಳು ರಂಗಸ್ಥಳ ಪ್ರವೇಶಿಸುವ ಮೊದಲು ಚೌಕಿಯಲ್ಲಿ ಗಣಪತಿ ಪೂಜೆ ಆಗಬೇಕು. ಹನುಮಂತ ಕುಣಿದುಕೊಂಡೇ ರಂಗಸ್ಥಳ ಪ್ರವೇಶಿಸುವನು. ಭಾಗವತರು ಹಾಡು, ಚೆಂಡೆ ಮದ್ದಲೆಗಳ ಬಡಿತಕ್ಕೆ ತಕ್ಕಂತೆ ಹನುಮಂತ ಹೆಜ್ಜೆ ಹಾಕುತ್ತಾನೆ. ಹನುಮಂತನ ಕುಣಿತವೇ ಒಂದು ವಿಶಿಷ್ಟ ಕುಣಿತವಾದ್ದರಿಂದ ಸಮರ್ಥ ಚೆಂಡೆ ಬಾರಿಸುವವನಿದ್ದರೆ ಮಾತ್ರ ಅದು ಯಶಸ್ವಿಯಾಗಬಲ್ಲದು. ಹನುಮಂತನನ್ನು ರಂಗದ ಮೇಲೆ ಸರಿಯಾಗಿ ಕುಣಿಸುವ ಹಿಮ್ಮೇಳ ಈಗ ಇಲ್ಲವಾಗಿದೆ. ಹನುಮಂತನ ಪ್ರವೇಶ ಕುಣಿತಕ್ಕೆ ಮೊದಲು 'ಅಂತರ್ ತೆರೆಪರ್ಪಾಟ' ಎಂಬ ವಿಶಿಷ್ಟ ಕುಣಿತವಿತ್ತು. ಹನುಮಂತನು ಸಮುದ್ರವನ್ನು ಹಾರಿದ ಒಬ್ಬ ಅಪ್ರತಿಮ ವೀರ ಎಂಬುದನ್ನು ತೋರಿಸುವುದೇ ಈ ಕುಣಿತದ ಉದ್ದೇಶವಾಗಿತ್ತು. ರಂಗದಿಂದ ಮಾಯವಾದ ಇನ್ನೊಂದು ಕುಣಿತ ಅಷ್ಟಾವಧಾನ ಪ್ರದರ್ಶನ. ಹನುಮಂತನು ರಂಗಪ್ರವೇಶಿಸುವಾಗ ಕೈಯಲ್ಲಿ ಮಾವಿನಸೊಪ್ಪು ಹಿಡಿದು ಬರುತ್ತಾನೆ. ಇದಕ್ಕೆ ಕಾರಣಗಳು, ಕಪಿಗಳು ವಾಸಿಸುವುದು ಮರದಲ್ಲಿ ಎಂಬುದನ್ನು ಪ್ರೇಕ್ಷಕರಿಗೆ ಬಿಂಬಿಸುವುದೇ ಆಗಿದೆ. ಹಿಂದೆ ಯಕ್ಷಗಾನದಲ್ಲಿದ್ದ ಹನುಮಂತನ ವೇಷಭೂಷಣಗಳಲ್ಲಿ ಬದಲಾವಣೆಯಾಗಲು ಕಾರಣ ವ್ಯವಸಾಯಿ ನಾಟಕ ಕಂಪನಿಗಳು. ಹನುಮಂತನ ಕಿರೀಟ ಕಳಚಲಾಯಿತು. ಅವನಿಗೆ ಪೈಲ್ವಾನ್ ಚಡ್ಡಿ ತೊಡಿಸಲಾಯಿತು. ಗರುಡ ಸದಾಶಿವರಾಯರ ಹನುಮಂತ ವ್ಯವಸಾಯಿ ಯಕ್ಷಗಾನ ಮೇಳಗಳ ಮೇಲೆ ಪ್ರಭಾವ ಬೀರಿರಬೇಕು. ದಿವಂಗತ ಪೂರ್ವಿ ರಾಮಕೃಷ್ಣ ಹೆಬ್ಬಾರರು ಹನುಮಂತನ ವೇಷಭೂಷಣಗಳನ್ನು ನಾಟಕ ವೇಷಭೂಷಣಗಳಿಗೆ ಬದಲಾಯಿಸಿದರೆಂದು ಹೇಳಲಾಗಿದೆ. ಅವರ ಹನುಮಂತನ ವೇಷ ಆ ಕಾಲದಲ್ಲಿ ಪ್ರಸಿದ್ಧವಾದದ್ದು. ಅಶೋಕ ವನದಲ್ಲಿ ಶೋಕತಪ್ತಳಾಗಿ ಕುಳಿತಿದ್ದ ಸೀತೆಯಲ್ಲಿಗೆ ಹನುಮಂತ ಬರುತ್ತಾನೆ. ಈ ಹನುಮಂತನ ಕಿರೀಟಕ್ಕೆ ವಿಶೇಷವಾದ ಬಲ್ಬ್‌ಗಳನ್ನು ಹಾಕಿ ಅವು ಮಿನುಗುವಂತೆ ಮಾಡಿದ್ದುದು ಪ್ರೇಕ್ಷಕರಿಗೆ ಹೊಸ ಆಕರ್ಷಣೆಯಾಗಿತ್ತು.” ಅಲಂಕಾರ, ವೇಷಭೂಷಣಗಳ ಕೊಡುಕೊಳ್ಳುವಿಕೆಯ ಪ್ರಕ್ರಿಯೆಯ ಗತಿಯೊಂದಿಗೆ ಹನುಮಂತನ ಪಾತ್ರದ ಮಾದರಿಯೊಂದು ಆವಿಷ್ಕಾರಗೊಳ್ಳುತ್ತಾ ಬಂದಿತು. ಕಲಾವಿದನಲ್ಲಿರುವ ಸೃಜನಶೀಲ ಗುಣದ ಜೊತೆಗೆ, ಕಾಲದ ಒತ್ತಡವೂ ಕಾರಣವಾಗಿ ನಿಂತಿರುವುದನ್ನು ಕಾಣಬಹುದು.

ಶಿವರಾಮ ಕಾರಂತರು ಹನುಮಂತನ ಪಾತ್ರದ ಕುರಿತು ಹೀಗೆ ಬರೆದಿದ್ದಾರೆ: “ಆಂಜನೇಯನಂತಹ ಪಾತ್ರದ ಮುಖವರ್ಣಿಕೆ ಹೇಗಿತ್ತೆಂಬುದನ್ನು ತೋರಿಸಬಲ್ಲವರ ಅಭಾವವಿದೆ. ಈ ನಡುವೆ ಶತಕದ ಆರಂಭದಲ್ಲಿ ವ್ಯವಸಾಯಿ ನಾಟಕ ಕಂಪನಿಗಳು ಕನ್ನಡ ದೇಶವನ್ನು ಸುತ್ತಾಡುತ್ತ ತಮ್ಮ ಸಂಪ್ರದಾಯಗಳನ್ನು ಸಾರಿದರು. 'ಲಂಕಾದಹನ'ದಂತಹ ಕಥೆ ಜನಪ್ರಿಯವಾಗತೊಡಗಿತು. ಅಲ್ಲಿನವರು ಆಂಜನೇಯನ ಆಕೃತಿಯನ್ನು ರಾಜ ರವಿವರ್ಮನ ಅನುಕರಣೆಯಿಂದ ರಚಿಸಿದರು. ಅದನ್ನು ಕಂಡ

ಯಕ್ಷಗಾನ ಕಲಾವಿದರು ಅದೇ ಹಾದಿಯನ್ನು ತುಳಿದರು. ರವಿವರ್ಮನ ಆಂಜನೇಯ ವಾಸ್ತವಿಕ ದೃಷ್ಟಿಯಿಂದ ರೂಪುಗೊಂಡ ಆಕಾರ. ಯಕ್ಷಗಾನದ ಪಾತ್ರಗಳು ವಾಸ್ತವಿಕತೆಯಿಂದ ದೂರ ಸರಿದ ಸಂಪ್ರದಾಯದವು ಎಂಬುದನ್ನು ಈ ಕಲಾವಿದರು ಮರೆತೇ ಬಿಟ್ಟರು. ಈ ಕಾರಣಗಳಿಂದ ಅನೇಕ ಪಾತ್ರಗಳಿಗೆ ಮುಖವರ್ಣಿಕೆ ವೇಷಭೂಷಣಗಳ ಸಂಪ್ರದಾಯ ಅವಾಸ್ತವಿಕ ಎಂದರೆ ಕಾಲ್ಪನಿಕತೆಯ ತಳಹದಿಯ ಮೇಲೆ ಅವನ್ನು ತಿರುಗಿ ನಿಲ್ಲಿಸಬೇಕೆಂದಲ್ಲ."[1] ಶಿವರಾಮ ಕಾರಂತರು ಐತಿಹಾಸಿಕ ಕಲಾವಿದರ ಹನುಮಂತನ ವೇಷಗಾರಿಕೆಯನ್ನು ಅವರೊಂದಿಗೆ ಸಮಾಲೋಚಿಸಿ ತಕ್ಕುದಾದ ರೂಪವನ್ನು ಕೊಟ್ಟಿದ್ದಾರೆ. ಇದೇ ಅಂತಿಮ ರೂಪವಾಗಿ ಉಳಿದಿಲ್ಲ. ಮಾರ್ಪಾಡಾಗುತ್ತಾ ಬಂದಿದೆ. ಇಂದು ತೆಂಕುತಿಟ್ಟಿನಲ್ಲಿ ಅನೇಕ ಪ್ರಯೋಗಗಳಲ್ಲಿ ಹಸಿರು ರೋಮದ ಚೋಲೆ, ಇಜಾರು ಮತ್ತು ಅಂಗಿತೊಟ್ಟ ಆಧುನಿಕವಾದ ಹನುಮಂತನ ರೂಪವು ಧಾರಣೆಯಾಗಿದೆ. ಇದು ಕುರಿಯ ವಿಠಲ ಶಾಸ್ತ್ರೀಯವರಿಂದ ಬಳಕೆಗೆ ಬಂದ ಸಂಪ್ರದಾಯವೆನ್ನುತ್ತಾರೆ ಅನೇಕ ಹಿರಿಯ ತಲೆಮಾರಿನ ಕಲಾವಿದರು.

ಕುಮಟಾ ಗೋವಿಂದ ನಾಯ್ಕರ ಆಂಜನೇಯನ ಆಕೃತಿಗೆ ಬಹುಹಿಂದಣ ಕಾಲದಿಂದ ಬೆಳೆದು ಬಂದ ಬಯಲಾಟ ಪರಂಪರೆಯ ಹಿರಿದಾದ ಇತಿಹಾಸವಿದೆ. ಜೊತೆಗೆ ಅವರ ಮನೆತನದ ಪ್ರಭಾವ ಪ್ರೇರಣೆಗಳು ಹೆಚ್ಚಿದೆ. ಗೋವಿಂದ ನಾಯ್ಕರ ಅಜ್ಜ 'ಗೋವಿಂದಪ್ಪ ನಾಯ್ಕ' ಸಮರ್ಥ ಕಲಾವಿದರಾಗಿದ್ದರು. ಗೋವಿಂದಪ್ಪ ನಾಯ್ಕರು ಧೀರಗಂಭೀರ ವೇಷಗಳಲ್ಲಿ ಹೆಸರು ಮಾಡಿದವರು. ಅವರು ಹನುಮಂತನ ವೇಷದಲ್ಲಿ ಪ್ರಸಿದ್ಧರಾಗಿದ್ದರು. ಆ ಕಾಲದಲ್ಲಾಗಲೇ ಅವರು ಬಯಲಾಟದ ಮೇಳಗಳನ್ನು ಸಜ್ಜುಗೊಳಿಸುವ ಯೋಜನೆಯನ್ನು ರೂಪಿಸಿದರಂತೆ. ಅವರಿಗೆ ಅವರಿಗಿಂತ ಹಿಂದಣ ಕಾಲದವರು ಹನುಮಂತನ ಪಾತ್ರವನ್ನು ಧಾರೆ ಎರೆದಿದ್ದರಂತೆ. ಗೋವಿಂದಪ್ಪ ನಾಯ್ಕರ ಹನುಮಂತನ ಪಾತ್ರದ ಸ್ವರೂಪ, ವೇಷಭೂಷಣಗಳು ಭರ್ಜರಿ ರೂಪದಲ್ಲಿದ್ದ ಆಕೃತಿ. ಈ ಕುರಿತಾಗಿ ಮಾಹಿತಿಗಳು ಮುಸುಕಿನಲ್ಲಿದೆ. ಅವರ ವೇಷಕ್ಕೆ ಗಣಪತಿಯ ಶ್ರೀ ಕಿರೀಟ ಒಲಿದಿದ್ದರ ಬಗ್ಗೆ, ಅವರ ಹನುಮಂತನ ಪಾತ್ರದ ಪ್ರಸಿದ್ಧಿಯ ಬಗ್ಗೆ ಸಾಕ್ಷ್ಯಾಧಾರಗಳು ಇವೆ. ಅವರ ಮಗನೇ ಮುಕುಂದ ನಾಯ್ಕ. ಇವರು ಕುಮಟಾ ಗೋವಿಂದ ನಾಯ್ಕರ ತಂದೆ. ಮುಕುಂದ ನಾಯ್ಕ ಒಬ್ಬ ಅದ್ಭುತ ವೇಷಧಾರಿ. ಮುಕುಂದ ನಾಯ್ಕರೂ ಕೂಡ ಹನುಮಂತನ ಪಾತ್ರಕ್ಕೆ ಹೆಸರುವಾಸಿಯಾಗಿದ್ದರು. ಅವರ ಭರ್ಜರಿ ವೇಷಗಳು ಇಂದಿಗೂ ಜನರಲ್ಲಿ ಅಚ್ಚಳಿಯದೇ ಉಳಿದಿವೆ. ಮುಕುಂದ ನಾಯ್ಕರು ರಾಮಾಯಣದ ಪ್ರಸಂಗಗಳಲ್ಲಿ ಬರುವ ಎಲ್ಲಾ ಮಾದರಿಯ ಹನುಮಂತನನ್ನು ನಿರ್ವಹಿಸಿದ್ದಾರೆ. ಇವರು 1944ರಲ್ಲಿ ನಿಧನರಾದರು. ಅಂದರೆ ಅವರ ಕಾಲದಲ್ಲಿ ಹನುಮಂತನ ವೇಷವು ಸಾಂಪ್ರದಾಯಿಕವಾದ ರಾಜ ರವಿವರ್ಮನ ಶೈಲಿಯೇ ರೂಢಿಯಲ್ಲಿತ್ತು. ದೈವಿಕವಾದ ಆರಾಧನೆಗೆ ಒಳಗಾಗುವ ರೀತಿಯಲ್ಲಿಯೇ

ಯಕ್ಷಗಾನದಲ್ಲಿ ಹನುಮಂತನ ಪಾತ್ರವನ್ನು ನಿರ್ವಹಿಸುತ್ತಿದ್ದರು ಎನಿಸುತ್ತದೆ. ಮುಕುಂದ ನಾಯ್ಕರ ಕಾಲಮಾನದ ನಂತರ, ಅಂದರೆ ಸು. 195060ರ ದಶಕದಿಂದೀಚೆಗೆ ಯಕ್ಷಗಾನೀಯ ಪಾತ್ರಗಳ ವೇಷಭೂಷಣಗಳಲ್ಲಿ ಗಮನಾರ್ಹವಾದ ಬದಲಾವಣೆಗಳು ಉಂಟಾಗಲು ಪ್ರಾರಂಭವಾದವು. ಪರಿಣಾಮವಾಗಿ ಹೊಸತನಗಳು ಹೆಚ್ಚಾಗಿ ಆಕರ್ಷಣೆಗಳಿಗೆ ಒಳಗಾಗಲು ಶುರುವಾದವು. ಇದರಿಂದ ಯಕ್ಷಗಾನೀಯ ಶೈಲಿಯಲ್ಲಿ ಎಷ್ಟು ಸುಧಾರಣೆ ಬಂದಿತೋ ಇಲ್ಲವೋ, ಹಳೆಯ ಕೊಂಡಿ ಮಾತ್ರ ಕಳಚಿತು. ಬಯಲಾಟದ ವೇಷದ ವೈಖರಿಗಳು ಮಾಯವಾದವು. ನಾಟಕ ಕಂಪನಿಯ ವೇಷಭೂಷಣಗಳು ಹೆಚ್ಚು ಆಕರ್ಷಿಸಲ್ಪಟ್ಟವು. ಹನುಮಂತನ ವೇಷದ ಪರಿಕಲ್ಪನೆಗಳು ಯಕ್ಷಗಾನೀಯ ಸ್ವರೂಪವನ್ನು ಪಡೆಯಲು ಬಹುಕಾಲದ ಅಂತರವನ್ನು ಪಡೆಯಿತು. ಈ ಮಾರ್ಪಾಡುಗಳನ್ನು ಪಡೆಯುವ ಕಾಲದಲ್ಲಿ ಗೋವಿಂದ ನಾಯ್ಕರು ಯಕ್ಷಗಾನಕ್ಕೆ ಪಾದಾರ್ಪಣೆ ಮಾಡಿರುವುದರಿಂದ ಹಿಂದಣ ಸಾಂಪ್ರದಾಯಿಕ ನಡೆಯೊಂದಿಗೆ ತನ್ನದಾದ ಕಲಾತ್ಮಕತೆಯ ಶೈಲಿಯನ್ನು ರೂಪಿಸಿಕೊಳ್ಳಲು ಅಡಿಪಾಯವನ್ನು ಹಾಕಿಕೊಂಡರು. ಇದರಿಂದಾಗಿ ನಾಯ್ಕರು ವಿಶಿಷ್ಟವಾದ ಆಂಜನೇಯನ ಪಾತ್ರಕೃತಿರೂಪವನ್ನು ಯಕ್ಷಗಾನಕ್ಕೆ ತಂದುಕೊಟ್ಟರು. ಗೋವಿಂದ ನಾಯ್ಕರು ತಮ್ಮ ಮನೆತನದಿಂದ ಸಂಪ್ರದಾಯವಾಗಿ ಉಳಿದು ಬೆಳೆದು ಬಂದಿರುವ ಹನುಮಂತನ ವೇಷಭೂಷಣವನ್ನೂ, ನಟನೆಯನ್ನೂ ಇತರರ ಅನುಕರಣಾತ್ಮಕ ವೇಷದ ಶೈಲಿಯ ರೀತಿಗಳಿಗಿಂತ ಬಹುದೊಡ್ಡ ಪ್ರಮಾಣದ ಪ್ರಭಾವ, ಪ್ರೇರಣೆಗಳುಂಟಾಗಿದ್ದವು. ಜೊತೆಗೆ ತನ್ನ ಅಜ್ಜ ಮತ್ತು ತಂದೆಯಿಂದ ಬಂದಿರುವ ಹನುಮಂತನ ಪಾತ್ರದ ವಂಶವಾಹಿನಿಯ ಅಂಶಗಳು ಬೆನ್ನಿಗೆ ನಿಂತವು. ಗೋವಿಂದ ನಾಯ್ಕರು ಹನುಮಂತನ ಪಾತ್ರವನ್ನು ನಿರ್ವಹಿಸುವ ಸಂದರ್ಭದಲ್ಲಿ ಯಕ್ಷಗಾನದಲ್ಲಿ ಹನುಮಂತನ ಪಾತ್ರಕೃತಿಯಲ್ಲಿ ಸಾಕಷ್ಟು ಸುಧಾರಣೆಯನ್ನು ಕಂಡುಕೊಂಡಿತ್ತು. ತೆಂಕುತಿಟ್ಟಿನಲ್ಲಿ ಅನೇಕ ಕಲಾವಿದರು ಪ್ರಸಿದ್ಧಿಯನ್ನು ಸಾಧಿಸಿದ್ದರು. ಆದರೆ ತೆಂಕುತಿಟ್ಟಿನ ಕಲಾವಿದರ ಪಾತ್ರಗಳು ರೂಪುಗೊಳ್ಳುವಿಕೆಯಲ್ಲಿ ಕೇರಳದ ಕಥಕ್ಕಳಿಯ ಪ್ರಭಾವವು ಹೆಚ್ಚಿದೆ. ಶುದ್ಧ ಯಕ್ಷಗಾನ ಎಂದು ಹೇಳಬರುವುದಿಲ್ಲ. ಮಧ್ಯಬಡಗು ಮತ್ತು ಬಡಗುತಿಟ್ಟಿನ ಕಲಾವಿದರ ವೇಷಗಳು ಶುದ್ಧ ಕಲಾತ್ಮಕವಾದ ಶೈಲಿಯಲ್ಲಿಯೇ ರೂಪುಪಡೆಯುತ್ತದೆ. (ಈಗಾಗಲೇ ಇದರ ಬಗ್ಗೆ ಅನೇಕ ಚರ್ಚೆಗಳು ನಡೆದಿವೆ) ಯಕ್ಷಗಾನದ ಹನುಮಂತನ ವೇಷಕ್ಕೆ ಬೇರೆ ಬೇರೆ ಪ್ರಭಾವ, ಪ್ರೇರಣೆಗಳಿದ್ದರೂ, ಕಂಪನಿ ನಾಟಕದ ಸಂಸರ್ಗವು ಹೆಚ್ಚಾಗಿರುವುದರಿಂದ ನಾಟಕೀಯ ಶೈಲಿಯ ಕಿರೀಟ, ಉಡುಗೆತೊಡುಗೆ, ಅಲಂಕಾರ, ವೇಷಭೂಷಣಗಳು ಬರತೊಡಗಿದವು. ಇದು ಗೋವಿಂದ ನಾಯ್ಕರಿಗೆ ಬದಲಾವಣೆಗೊಳ್ಳಲು ಸುಸಂದರ್ಭವಾಗಿ ಅವರು ತಮ್ಮ ಕುಟುಂಬದ ಆಕೃತಿಯ ಆಂಜನೇಯನಿಗಿಂತ ತನ್ನ ಪಾತ್ರಕೃತಿಯಲ್ಲಿ ಭಿನ್ನತೆಯನ್ನು ಸಾಧಿಸಿಕೊಂಡು ಮುನ್ನಡೆದರು. ಆದರೆ ಯಕ್ಷಗಾನೀಯ ಮಜಲುಗಳಿಗೆ ಮುಕ್ಕಾಗದಂತೆ ಎಲ್ಲ ಹೊಸ

ಹೊಸ ಕಲಾವೈಶಿಷ್ಟ್ಯಗಳನ್ನು ರೂಢಿಸಿಕೊಂಡರು. ಆ ಮೂಲಕ ಭಾವಪೂರ್ಣವಾಗಿ ಪ್ರದರ್ಶಿಸುವ ಅಭಿಜಾತ ಕಲಾವಿದರೆನಿಸಿಕೊಂಡರು.

ಗೋವಿಂದ ನಾಯ್ಕರು ತನ್ನ ಎಲ್ಲಾ ಜಂಘಾಬಲದಿಂದ, 'ರಾಮಾಯಣ ಪ್ರಸಂಗ'ಗಳ ಹನುಮಂತನ ಪಾತ್ರದ ನವೀನ ಆಕೃತಿಯನ್ನು ಕೊಟ್ಟಿರುವುದು, ಯಕ್ಷಗಾನೀಯ ಕಲೆಗೆ ಸಂದ ಕಾಣಿಕೆಯಾಗಿದೆ. ಈ ಮೊದಲೇ ಇದ್ದ ಆಂಜನೇಯ ಪಾತ್ರದ ಕುರಿತು ಇರುವ ರಂಗ ಪರಿಕಲ್ಪನೆಯನ್ನು ಮುರಿದು ತನ್ನದೇ ವಿಶಿಷ್ಟ ನೆಲೆಯ ಪಾತ್ರ ಸ್ವರೂಪವನ್ನು ನೀಡಿದವರು. ತೆಂಕುಬಡಗಿನ ಯಕ್ಷಗಾನದಲ್ಲಿ ಹನುಮಂತನ ಪಾತ್ರಧಾರಿಗಳ ಹೆಸರು ಸ್ವಲ್ಪವೇ ಆದರೂ ಸಾಧನೀಯವಾದ ಗುರುತು. ದಕ್ಷಿಣದಲ್ಲಿ ಮಾರ್ವಿ ರಾಮಕೃಷ್ಣ ಹೆಬ್ಬಾರ, ಸಾಲಿಗ್ರಾಮ ಮಂಜುನಾಥ ನಾಯಕ, ವೀರಭದ್ರ ನಾಯಕ ಇವರೆಲ್ಲರದ್ದು ಒಂದು ರೀತಿಯ ಹೆಗ್ಗುರುತು. ಉತ್ತರ ಕನ್ನಡದಲ್ಲಿ ಕೊಂಡದಕುಳಿ ಲಕ್ಷ್ಮಣ ಹೆಗಡೆಯವರಿಂದ ಹನುಮಂತನ ಪಾತ್ರದ ನಟನೆಯ ಸಂಪ್ರದಾಯವೊಂದು ಹುಟ್ಟಿತು. ಇನ್ನೂ ಹಿಂದಕ್ಕೆ ಹೋದರೆ ಹಂದಿಗಪ್ಪ ಹೆಗಡೆ ಹನುಮಂತನ ಪಾತ್ರಕ್ಕೆ ಮೊದಲಾಗಿದ್ದರು ಎನ್ನುವುದು ಚಾರಿತ್ರಿಕ ದಾಖಲೆ. ಇವೆಲ್ಲದರ ಪರಂಪರೆಯ ಗತಿಯಲ್ಲಿ ಸಾಗಿದರೂ, ಗೋವಿಂದ ನಾಯ್ಕರ ಪಾತ್ರನಡೆಯ ದಾರಿಯೇ ಬೇರೆಯದ್ದು. ಅವರಲ್ಲಿ ಸಾಂಪ್ರದಾಯಿಕತ್ವದಿಂದ ವ್ಯಕ್ತಿಪ್ರತಿಭೆ, ಪ್ರತಿಭಾಸಾಮರ್ಥ್ಯದ ಎಲ್ಲೆಗಳನ್ನು ಮೀರಿಸುವ ಗುರಿಯನ್ನು ಹೊಂದಿದ್ದರೆನ್ನುವುದು ಅವರ ಹನುಮಂತನ ಪಾತ್ರದಲ್ಲಿ ಭಾಸವಾಗುತ್ತದೆ. ಯಾಕೆಂದರೆ ಉತ್ತರ ಕನ್ನಡದಲ್ಲಿ ಶಂಭು ಹೆಗಡೆ, ಚಿಟ್ಟಾಣಿಯವರು ಸೇರಿದಂತೆ ದಿಗ್ಗಜ ಕಲಾವಿದರೆಲ್ಲರೂ ಹನುಮಂತನ ವೇಷವನ್ನು ಮಾಡಿದ್ದಾರೆ. ಅದೇ ಕಾಲಕ್ಕೆ ಗೋವಿಂದ ನಾಯ್ಕರೂ ಹನುಮಂತನ ವೇಷವನ್ನು ಮಾಡಿದ್ದಾರೆ. ವರ್ಗಜಾತಿಯ ಹಿನ್ನೆಲೆಯಲ್ಲಿ ಅವರು ಆ ಕಾಲದ ಸಿದ್ಧಿಪ್ರಸಿದ್ಧಿ ಕಲಾವಿದರ ಪಟ್ಟಿಯಲ್ಲಿ ಸೇರಲಿಲ್ಲವೇ ಹೊರತು, ಸಾಮರ್ಥ್ಯದಿಂದ ತುಂಬು ಶ್ರೀಮಂತರು. ಇಂದಿಗೂ ನನಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಿಕ್ಕ ಸಾವಿರಾರು ಜನ ಕುಮಟಾ ಗೋವಿಂದ ನಾಯ್ಕರ ಹನುಮಂತನ ವೇಷದ ಕುರಿತು, ಅವರವರ ಗ್ರಹಿಕೆಗೆ ತಕ್ಕಂತೆ ನಾಯ್ಕರ ಪಾತ್ರಕೃತಿಯನ್ನು ಚಿತ್ರಿಸುತ್ತಾರೆ. ಎಷ್ಟೋ ಜನ ದೈವಾನುಗತವಾಗಿ ಅವರನ್ನು ಕಾಣುತ್ತಾರೆ. 'ಅಭಿನವ ಆಂಜನೇಯ', 'ಕಲಿಯುಗದ ಆಂಜನೇಯ' ಎಂದೆಲ್ಲ ಹತ್ತು ಹಲವು ಬಗೆಗಳಲ್ಲಿ ಬಿಂಬಿಸುವುದನ್ನು ನೋಡಿದಾಗ ನಾಯ್ಕರ ಹನುಮಂತನ ಪಾತ್ರಕೃತಿಯು ಯಕ್ಷಗಾನಕ್ಕೆ ಸಂದ ಬಹುದೊಡ್ಡ ಕೊಡುಗೆ, ಕಾಣಿಕೆ ಎಂದೇ ಹೇಳಬಹುದು.

ಗೋವಿಂದ ನಾಯ್ಕರು ಪುರಾಣ ಇತಿಹಾಸದ ಕಲಾತ್ಮಕ ಸಂಕೇತಗಳನ್ನು ಬಳಸಿಕೊಂಡು, ಆಧುನಿಕ ನಾಟಕ ವಿಚಾರಗಳನ್ನೂ ಅಳವಡಿಸಿಕೊಂಡು ನವೀನವಾದ 'ಹನುಮಂತ'ನ ಪಾತ್ರಕೃತಿಯ ಸಂವಿಧಾನ ಚೌಕಟ್ಟನ್ನು ಯಕ್ಷಗಾನಕ್ಕೆ ನೀಡಿದರು. ಈ

ಕೆಲಸ ತೆಂಕುತಿಟ್ಟಿನಲ್ಲಿ ಕುರಿಯ ವಿಠಲ ಶಾಸ್ತ್ರೀಯವರಿಂದ ನಡೆದರೆ, ಉತ್ತರ ಕನ್ನಡದಲ್ಲಿ ಕುಮಟಾ ಗೋವಿಂದ ನಾಯ್ಕರಿಂದ ಪರಿಪೂರ್ಣವಾಗಿ ನೆರವೇರಿದೆ ಎನ್ನುವುದು ಸುಸ್ಪಷ್ಟ. ಅವರ ಪಾತ್ರಕೃತಿಯು ಸಾಮಾನ್ಯನಿಗೂ ನಿಲುಕುವ, ಅಸಾಮಾನ್ಯನಿಗೂ ನಿಬ್ಬೆರಗು ಮಾಡುವ ಅರ್ಥಬದ್ಧವಾದ ರಂಗಕೃತಿ. ಪರಂಪರೆ ಮತ್ತು ನಾವೀನ್ಯವಾದ ಪ್ರಯೋಗಶೀಲತೆಗೆ ಆದ್ಯತೆ. ಪ್ರತಿಯೊಂದು ಪ್ರಯೋಗದಲ್ಲೂ ಪರಿಣಾಮಕಾರಿಯಾಗುವ ನವನವೋನ್ಮೇಷವಾದ ಪರಿಪಕ್ವತೆಯ ಪ್ರೌಢವಾದ ಅರ್ಥಗಾರಿಕೆ, ನೃತ್ಯ, ಕುಣಿತ, ನಟನೆ, ಅಭಿನಯಗಳ ವಿನೂತನ ಸೃಷ್ಟಿಯನ್ನು ಸಾಕ್ಷಾತ್ಕರಿಸಿಕೊಡುವ, ಅವತರಿಸುವ ಕಲಾಮೂರ್ತಿ. ಹನುಮಂತ, ಮಾರುತಿ, ಆಂಜನೇಯನ ಪ್ರತಿಕೃತಿ ರಂಗಕಲೆಗಳಲ್ಲಷ್ಟೇ ಸೀಮಿತವಾಗಿರಲಿಲ್ಲ. ಬದುಕಿನಲ್ಲಿ ಆರಾಧನೆಯ ಮೂರ್ತಿ, ಶಿಲ್ಪ, ಕಲಾಶಿಲ್ಪವಾಗಿ ಕಾಣುವುದಕ್ಕಾಗಿ ಅನುದಿನವೂ ಸಾಧನೆಗೈದವರು. ಈ ಕಾರಣದಿಂದ ಯಕ್ಷಗಾನದ ಮಾರುತಿ, ಹನುಮಂತನ ಪಾತ್ರದ ಮೂಲಕವಾಗಿಯೇ ಬಾಳ್ವೆಮಾಡಿದ ನಾಯ್ಕರು ಆತ್ಮನಿರಾವರಣವನ್ನು, ಪರಮಸಾಧನೆಯನ್ನು ಸಾಧಿಸಿರುವುದು ಕಾಣಬಹುದಾಗಿದೆ. ಈ ಕಲಾಮಾಧ್ಯಮದ ಮೂಲಕ ಸಾಗಿ ಸಾಧನೆಗೈದಿದ್ದಾರೆ. ಕಲಾವಿದರಿಗೆ ಭವಿಷ್ಯದಲ್ಲಿ ಮುನ್ನಡೆಯಲು ತೋರಿಸಿದ ದಾರಿಯ ದೂರ ಅನಂತವಾದುದು. ಇಂತಹದನ್ನು ಕೊಡುಗೆಯಾಗಿ, ಕಾಣಿಕೆಯಾಗಿ ಕೊಟ್ಟ ಕಲಾವಿದರ ಸಂಖ್ಯೆ ಕಡಿಮೆಯೇ. ಈ ಪಥದಲ್ಲಿ ಸಾಗಿದ ನಾಯ್ಕರ ಕಲಾನ್ವೇಷಣೆ, ಶೋಧನೆಯ ಅರಿವು, ಇರಿವು, ಜಾಣ್ಮೆ ಎಂದಿಗೂ ಉಳಿಯುವಂತಹದ್ದು.

ಗೋವಿಂದ ನಾಯ್ಕರ ಹನುಮಂತ ಶೀಲ, ಶಿಷ್ಟ, ವಿಶಿಷ್ಟ. ಪ್ರತಿಯೊಂದು ಪ್ರಸಂಗದ ವಿವಿಧ ಸನ್ನಿವೇಶಗಳಲ್ಲೂ ವಿಭಿನ್ನವಾಗಿಯೇ ಕಾಣಸಿಗುತ್ತಾನೆ. ಹನುಮಂತನ ಶೀಲತೆ, ಸೂಕ್ಷ್ಮಜ್ಞತೆ ಮತ್ತು ವಾಕ್‌ಶಕ್ತಿಗಳು ಅಧಿಕ ಪ್ರಮಾಣದಲ್ಲಿ ಪ್ರಕಟಗೊಂಡಿರುವ ಹಲವು ಸಂದರ್ಭಗಳಲ್ಲಿ ಲಂಕಿಣಿಯ ಸಂದರ್ಭವೂ ಒಂದು ಮಹತ್ವಪೂರ್ಣವಾದ ಸನ್ನಿವೇಶ. ಇದನ್ನು ಕಂಡವರಾರೂ ಕೂಡ ಬೆರಗಾಗದೇ ಇರಲು ಸಾಧ್ಯವಿಲ್ಲ. ಅಹಂಕಾರ, ದರ್ಪ, ಸೊಕ್ಕು ಇವುಗಳನ್ನು ಮುರಿದು ದೈವಾದೀನಭಾವವನ್ನು ಉದ್ದೀಪನಗೊಳಿಸುವ ಮಾರುತಿ ಪ್ರತಾಪದಲ್ಲಿಯೂ ವೀರ, ಶೌರ್ಯ, ಭಕ್ತಿಭಾವಗಳ ಅಭಿವ್ಯಕ್ತಿಯು ಅತ್ಯುನ್ನತ ಮಟ್ಟದಲ್ಲಿರುವುದನ್ನು ಕಾಣಬಹುದು. ಋಷ್ಯಮುಖ ಪರ್ವತದಲ್ಲಿ ರಾಮನ ಬಾಳಿಗೆ ಹನುಮಂತ ಬಂಧು. ಆ ಸಂದರ್ಭಕ್ಕೆ ಶ್ರೀರಾಮನ ಬಾಳಿನ ಪೂರ್ಣತೆಗೆ ಹನುಮಂತ ಎಷ್ಟು ಅನಿವಾರ್ಯವಾಗಿದ್ದ ಎಂಬುದನ್ನು ಮನಗಾಣಿಸುವ ಶೈಲಿಯೇ ಅತ್ಯುನ್ನತವಾದದ್ದು. ಸೀತಾಮಾತೆಯನ್ನು ಅರಸುತ್ತಾ ಲಂಕೆಗೆ ಬಂದು ಅಶೋಕವನದಲ್ಲಿ ಸೀತೆಯನ್ನು ಕಂಡು, ಸೀತೆಯಲ್ಲಿ ತನ್ನ ಪರಿಚಯ ಹೇಳಿ ರಾಮನ ಮುದ್ರೆಯುಂಗುರವನ್ನು ನೀಡಿ, ರಾಮನ ಕ್ಷೇಮದ ವಿಚಾರವನ್ನೂ

ಹೇಳುವಾಗ ಅವರಲ್ಲಿ ಪ್ರಕಟವಾಗುತ್ತಿರುವ ಭಾವಗಳು, ಸೀತೆಯ ಮೇಲಿರುವ ಭಕ್ತಿಭಾವಗಳು ಅವರಲ್ಲಿ ಅಭಿವ್ಯಕ್ತವಾಗುವ ರೀತಿಯು ಅತ್ಯಪೂರ್ವವಾದದ್ದು. ಎಂಥವನೇ ಆದರೂ ಒಂದು ಬಾರಿ ಭಾವುಕರಾಗುವಂತೆ ಅಭಿನಯಿಸುತ್ತಿದ್ದರು. ಅವರ ಹನುಮಂತನಿಗೆ ತಕ್ಕಂತೆ ಅಷ್ಟೇ ಪ್ರಬುದ್ಧತೆಯಿಂದ ಪ್ರವೀಣಚಂದ್ರ ಮತ್ತು ಹೊನ್ನಪ್ಪ ಗೋಕರ್ಣ ಸೇರಿದಂತೆ ಮೊದಲಾದವರ ಸೀತೆಯ ಪಾತ್ರಗಳು ಮೂಡಿಬರುತ್ತಿದ್ದವು. ಇನ್ನೊಂದು ಮಹತ್ವದ ಸಂದರ್ಭವೆಂದರೆ ಶರಸೇತು ಬಂಧದ ಅವರ ಹನುಮಂತನಲ್ಲಿ ವೀರತ್ವವೇ ಪ್ರಧಾನವಾಗಿ ಕಂಡರೂ, ಭಕ್ತಿ, ಕರುಣದ ಭಾವಗಳು, ತನ್ನ ಮಿತಿಯ ಎಲ್ಲೆಗಳನ್ನು ಕಂಡುಕೊಳ್ಳುವ ಭಾವಗಳನ್ನು ಅಭಿವ್ಯಕ್ತಿಸುವ ರೀತಿಯು ಮಹಾದಾದುದ್ದೇ. ನಾಯ್ಕರು ಹನುಮಂತ ಸಮರ ಶೌರ್ಯಕ್ಕೆ, ವೀರತ್ವಕ್ಕೆ, ಯುದ್ಧ ಭಯಂಕರ ಸನ್ನಿವೇಶಕ್ಕೆ ಎಷ್ಟು ಉತ್ಸಾಹದಲ್ಲಿದ್ದು ಅವುಗಳಿಗೆ ಮುಕ್ಕಾಗದಂತೆ ನಟಿಸುತ್ತಿದ್ದರೋ, ಶೃಂಗಾರ, ಶಾಂತ, ಕರುಣವನ್ನೂ ಅಷ್ಟೇ ಅಪ್ಪುಗೆಯಿಂದ ಭಾವನಾತ್ಮಕವಾಗಿ ನಟಿಸುವ ಶೈಲಿ ಗಮನಾರ್ಹ. ಹನುಮಂತನ ಪಾತ್ರದಲ್ಲಿ ಅವರಿಗಿದ್ದ ಆಸಕ್ತಿ, ಪ್ರೀತಿ, ಒಲವುಗಳು ಅಪಾರ. ರಂಗದಲ್ಲಿ ಹನುಮಂತನಾಗಿ ತಗ್ಗಿ ಬಗ್ಗಿ ನಡೆಯುವ ಮುಗ್ಧತೆಯ ಗುಣದ ಮನಸ್ಸು ಅವರದು. ಅದು ರಂಗದಮೇಲೆ, ಪರದೆಯಮೇಲೆ ಅಷ್ಟೇ ಜೀವಂತವಾಗಿರದೆ ನಿಜ ಜೀವನದಲ್ಲೂ 'ಹನುಮಂತ'ನನ್ನು ಧ್ಯಾನಿಸುವ, ಆರಾಧಿಸುವ ಅಧ್ಯಾತ್ಮಸಂಪ್ರದಾಯ ಅವರದ್ದಾಗಿತ್ತು. ಆದ್ದರಿಂದ ಇಂದಿಗೂ ಜನಮನದಲ್ಲಿ 'ಅಭಿನವ ಆಂಜನೇಯ', 'ಕಲಿಯುಗದ ಮಾರುತಿ' ಎಂದೆಲ್ಲ ಕರೆಸಿಕೊಳ್ಳುತ್ತಿದ್ದಾರೆ.

ಗೋವಿಂದ ನಾಯ್ಕರ ಹನುಮಂತನ ವೇಷವನ್ನು ಕಂಡವರೆಲ್ಲ ಭಕ್ತಿಭಾವದಿಂದ ಮೆಚ್ಚುಗೆಯನ್ನು ವ್ಯಕ್ತಪಡಿಸದ, ಯೋಗ್ಯವಂತಿಕೆಯ ವಿಮರ್ಶೆಯನ್ನು ಬರೆಯದ ವ್ಯಕ್ತಿಗಳಿಲ್ಲ. "ಖ್ಯಾತ ಚಿತ್ರನಟ ರಾಜಕುಮಾರ, ಉದಯಕುಮಾರ ಅಂಥವರು ಗೋವಿಂದ ನಾಯ್ಕರ ರಾಮಾಂಜನೇಯದ ಆಂಜನೇಯನ ಪಾತ್ರವನ್ನು ನೋಡಿ ಮೂಕವಿಸ್ಮಿತರಾಗಿ, ಆಟಮುಗಿದ ಮೇಲೆ ನಾಯ್ಕರು ಚೌಕಿಮನೆಗೆ ಹೋಗಿ ವೇಷ ತೆಗೆಯುವ ಮುನ್ನವೇ ಆಲಂಗಿಸಿಕೊಂಡರು. ಆಂಜನೇಯನ ಕುರಿತ ಭಕ್ತಿಭಾವವನ್ನು ವ್ಯಕ್ತಪಡಿಸಿದರು. ಶಹಬ್ಬಾಸ್‌ಗಿರಿಯ ಅಭಿನಂದನೆಯನ್ನು ಸಲ್ಲಿಸಿದ್ದರು." ಸಾಮಾನ್ಯವಾಗಿ ನಾನು ಕೇಳಿದಂತೆ ನಾಯ್ಕರ ಹನುಮಂತನ ಪಾತ್ರಕೃತಿಗೆ ಕರಾವಳಿ ಕರ್ನಾಟಕದಿಂದ ಮುಂಬೈ, ಮದ್ರಾಸ್‌ನಿಂದ ಮತ್ತು ದೇಶದ ಬೇರೆ ಬೇರೆ ಸ್ಥಳದ ಜನರ ಅದ್ದೂರಿ ಮೆಚ್ಚುಗೆಯಿತ್ತು. ಇದರಿಂದ ನಾಯ್ಕರ ಹನುಮಂತನ ಪಾತ್ರವು ದಿನ ಕಳೆದಂತೆ ಕಣ್ಣಿಗೆ ಹೊಸ ದೃಷ್ಟಿಯನ್ನೇ ಕೊಟ್ಟು ಅವರ ಅಭಿನಯ ಅತ್ಯಪೂರ್ವವೆನಿಸಿತು, ಎನ್ನುವ ಹಲವು ಹಿರಿಯ ಪ್ರಜ್ಞಾವಂತ ಪ್ರೇಕ್ಷಕರಿದ್ದಾರೆ. ಜೊತೆಗೆ ಆ ಕಾಲದ ವಿಮರ್ಶಕರಿಂದಲೂ ಒಳ್ಳೆಯ ಹೆಸರನ್ನು ಸಂಪಾದಿಸಿಕೊಂಡವರಾಗಿದ್ದರು. "ಕೇವಲ ಬಣ್ಣ, ಬೆಳಕು, ಉಡುಪು, ಹಾಡುಗಾರಿಕೆ, ಆಂಗಿಕ ಅಭಿನಯಗಳಿಗೇ ಮರುಳಾಗುವ ನಮ್ಮ

ಹುಡುಗತನದಿಂದ ಹಿಡಿದು, ವಿಮರ್ಶೆಯ ವಯಸ್ಸಿಗೆ ಬಂದಾಗಲೂ, ಆಮೇಲೂ ಹತ್ತು ಕಡೆಯಿಂದ ತಾರತಮ್ಯಗಳನ್ನು ಹೂಡಿ ತರ್ಕಮಾನ ಶಕ್ತಿಯನ್ನು ಪಡೆದ ಮೇಲೂ ಅವರ ಅಭಿನಯದ ಗಾಢತೆ, ನಯ, ಸೌಂದರ್ಯ, ಗಾಂಭೀರ್ಯಗಳ ವಿಚಾರವಾಗಿ ನಮಗೆ ಅವರಲ್ಲಿ ಗೌರವವೇ ವೃದ್ಧಿಯಾಯಿತು”[2] ಎಂಬುವ ಮಾತನ್ನು ಗ್ರಹಿಸಿದಾಗ ಎಂಥ ಪರಿಪಕ್ವವಾದ ಕಲಾಸೃಷ್ಟಿಯ ಪಾತ್ರನಿರ್ವಹಣೆ ಆಗಿತ್ತೆಂಬುದು ಕಣ್ಮುಂದೆ ಬರುತ್ತದೆ.

**ಸಮಾರೋಪ:**

ಶ್ರೀರಾಮ ಮತ್ತು ಹನುಮಂತ ಎಂದರೆ 'ಪೂರ್ಣಾರ್ಥ'ದ ಪ್ರತಿಮೆಯ ದರ್ಶನವೆಂದು ಭರತಭೂಮಿ ಕಂಡಿದೆ; ಕಾಣುತ್ತಲೂ ಇದೆ. ಇದೇ ಅರ್ಥದಲ್ಲಿ ಗೋವಿಂದ ನಾಯ್ಕರು ಹನುಮಂತನನ್ನು ಕಂಡರಿಸಲು ಪ್ರಯತ್ನಿಸಿದ್ದರು ಎನ್ನಬಹುದು. ಮಹೋನ್ನತವಾದ ಶೈಲಿಯಲ್ಲಿ ಹನುಮಂತನ ಪಾತ್ರದ ಕಲಾಕೃತಿಯನ್ನು ಕಡಿದು ನಿಲ್ಲಿಸುವುದು ಅಷ್ಟು ಸುಲಭದ ಕೆಲಸವಲ್ಲ. ಅದೊಂದು ಮಹಾತಪಸ್ಸಿನ ಫಲವೆಂದು ಕರೆಯಬೇಕು. ನಾಯ್ಕರ ಹನುಮಂತ ಎಂದರೆ ವಿನಯವಿಧೇಯತೆಗಳ, ಗೌರವ ಗಾಂಭೀರ್ಯಗಳ ಶ್ರೀಮೂರ್ತಿಯ ಸುಸೃಷ್ಟಿ. ಆಂಜನೇಯನ ಮಹಾಸಾಹಸದ ಯೋಗಸಿದ್ಧಿಯ ಅದ್ಭುತ ದಿವ್ಯದರ್ಶನವನ್ನು ಕಾಣಬಹುದು. ಅಭಿನಯದಲ್ಲಿ, ಭಾವನಾತ್ಮಕವಾದ ನೆಲೆಯಲ್ಲಿ, ಭಕ್ತಿಪರವಶತೆಯಲ್ಲಿ ಗೋವಿಂದ ನಾಯ್ಕರ ಹನುಮಂತ ಅತ್ಯಂತ ಶ್ರೀಮಂತವಾದ ಕಲಾಮೂರ್ತಿ. ಅಲ್ಲಿ ಯಾವುದೇ ಕಳಂಕವಿಲ್ಲ. ಕಪ್ಪು ಚುಕ್ಕೆಗಳಿಲ್ಲ. ಎಷ್ಟು ಬಾರಿ ನೋಡಿದರೂ ನೋಡಬೇಕೆಂದೆನಿಸುವ ದೃಶ್ಯಾವಳಿಗಳು. ಕೇಳಬೇಕೆಂಬ ಮಾತುಗಳು. ರಸವತ್ತಾದ ಸನ್ನಿವೇಶಗಳು. ಎಲ್ಲಿಯೂ ಕೃತಕತೆಗಳ ಸೃಷ್ಟಿಯಾಗಲಿ, ಪೊಳ್ಳುತನಗಳ ಸೇರ್ಪಡೆಗಳಾಗಲಿ ಇಲ್ಲ. ಎಲ್ಲವುಗಳಲ್ಲೂ ಸತ್ಯನಿಷ್ಠುರವಾದ, ಜೀವನದತ್ತವಾದ ಸಾದೃಶ್ಯ ಚಿತ್ರಾವಳಿಗಳು. ಅರ್ಥಪೂರ್ಣವಾದ ನಿಲುವುಗಳನ್ನು ಚಿತ್ರಿಸಿಕೊಡುವುದನ್ನು ಕಂಡಾಗ ಅವರ ಹನುಮಂತನ ಬಗೆಗಿದ್ದ ಗೌರವ, ಅದರ ಅಭಿಮಾನ, ನಂಬಿಕೆಗಳು ಉಚ್ಚಮಟ್ಟಕ್ಕೆ ಏರುತ್ತದೆ.

ಯಕ್ಷಗಾನದಲ್ಲಿ ಗೋವಿಂದ ನಾಯ್ಕರ 'ಆಂಜನೇಯ'ನ ಪಾತ್ರಕೃತಿ ಬಹುದೊಡ್ಡ ಆಯಾಮವನ್ನೇ ರೂಪಿಸಿಕೊಟ್ಟಿರುವುದಕ್ಕೆ ಅವರಲ್ಲಿರುವ ಅಧಮ್ಯ ಚೈತನ್ಯವೇ ಕಾರಣ. ಅದೊಂದು ವಿದ್ವತ್‌ಪೂರ್ಣ; ವೈಶಿಷ್ಟ್ಯಪೂರ್ಣ ಕಲಾಕೃತಿ. ಉಳಿದೆಲ್ಲ ಕಲಾವಿದರಿಗಿಂತ, ನಾಯ್ಕರ ಹನುಮಂತ ಎಂದಾಗ ಕೇವಲ ವಾನರವೀರನಾಗದೆ, ರಾಮಭಕ್ತನಾಗದೆ ವಿನಯಶೀಲನಾದ ಪ್ರತ್ಯುತ್ಪನ್ನಮತಿಯಾದ, ವಾಕ್ಚತುರನಾದ, ಸಮಯಜ್ಞನಾದ, ಧರ್ಮಜ್ಞನಾದ, ಸುಸಂಸ್ಕೃತಿಯ ಶಿಖರನಾದ, ಅಸಾಧಾರಣ ಯೋಗಿವರೇಣ್ಯನಾದ, ಸಿದ್ಧಾತ್ಮನಾದ, ಸಾಹಸ ಮೇರುವಾದ, ನಿರಹಂಕಾರಶೀಲನಾದ ಮಹಾಪುರುಷನನ್ನಾಗಿ

ಚಿತ್ರಿಸಿದ್ದಾರೆ. ರಂಗದಲ್ಲಿ ತೋರಿಸಿಕೊಟ್ಟಿದ್ದಾರೆ. ಈ ಪಾತ್ರಪ್ರತಿಕೃತಿಯನ್ನು ಮತ್ತೊಮ್ಮೆ ನಿರ್ಮಿಸಲು ಪ್ರಕೃತದವರೆಗೂ ಯಾರಿಂದಲೂ ಸಾಧ್ಯವಾಗಿಲ್ಲ. ಆ ಮಾದರಿಯಲ್ಲಿ ಹನುಮಂತನ ಪಾತ್ರವನ್ನು ನಿರ್ವಹಿಸುವ ಕಲಾವಿದರು ಹುಟ್ಟಲಿಲ್ಲ. ಯಾರು ಎಷ್ಟೇ ಬರೆದುಕೊಳ್ಳಲಿ, ತನ್ನ ಪರಾಕಾಷ್ಠೆಯನ್ನು ಮೆಚ್ಚಿಸಿಕೊಳ್ಳಲು ಕೃತಕತೆಯನ್ನು ಸೃಷ್ಟಿಸಿಕೊಂಡರೂ ಕುಮಟಾ ಗೋವಿಂದ ನಾಯ್ಕರ ಹನುಮಂತನ ಶೈಲಿಯನ್ನು ಸೃಜಿಸಲು ಯಾರಿಂದಲೂ ಸಾಧ್ಯವಿಲ್ಲ.

**ಅಡಿ ಟಿಪ್ಪಣಿಗಳು:**

1. ಶಿವರಾಮ ಕಾರಂತ, (1963), ಯಕ್ಷಗಾನ ಬಯಲಾಟ, ರವೀಂದ್ರ ಪುಸ್ತಕಾಲಯ, ಸಾಗರ, ಪು.ಸಂ. 174
2. ಎರ್ಮಾಳ ಮನೋಹರ ಕುಂದರ್ ಅವರ ಸಂದರ್ಶನ ಲೇಖನ, ಪು.ಸಂ. 5

## ಆಕರ ಗ್ರಂಥಗಳು:


1. ನಾಯಕ ವಿ.ಗ., (1983), ಚಿನ್ನದ ಪೆಟ್ಟಿಗೆ, ಸ್ಮೃತಿ ಪ್ರಕಾಶನ, ದಕ್ಷಿಣ ಕನ್ನಡ.
2. ಮೋಹನ ಕುಂಟಾರ್, (2009), ಯಕ್ಷಗಾನ ಆಹಾರ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
3. ಶಿವರಾಮ ಕಾರಂತ, (1963), ಯಕ್ಷಗಾನ ಬಯಲಾಟ, ರವೀಂದ್ರ ಮುಸ್ತಕಾಲಯ, ಸಾಗರ.
4. ನಾಯಕ ವಿ.ಗ., (1991), ಸ್ವಾಗತವನೆ ಕೋರಿದೆ ಹರ್ಷ ಚೆಲ್ಲಿ ಕಾದಿದೆ, ಸ್ಮೃತಿ ಪ್ರಕಾಶನ, ದ.ಕ.
5. ಕೃಷ್ಣಶಾಸ್ತ್ರೀ ಎ. ಆರ್., (2000), ವಚನ ಭಾರತ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
6. ಜಾನಕ್ಕೆ ತಿಮ್ಮಪ್ಪ ಹೆಗಡೆ, (2021), ಮಾರುತಿ ಪ್ರತಾಪ, ಯಕ್ಷವಾಹಿನಿ ಅಂತರ್ಜಾಲ ಆವೃತ್ತಿ.
7. ರಂಗನಾಥ ಎಚ್.ಕೆ, (2014), ಕರ್ನಾಟಕ ರಂಗಭೂಮಿ, ಹೇಮಂತ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.